
# ಬೆಳಕಿನ ಸಂಚಲನ

ಸಂಪುಟ 4, ಸಂಚಿಕೆ 3 ದ್ವೈಮಾಸಿಕ ವಾರ್ತಾಪತ್ರ ನವೆಂಬರ್–ಡಿಸೆಂಬರ್ 2016



**ಗುರೂಜಿ ಕೃಷ್ಣಾನಂದ (1939-2012)**

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಠಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷ ಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ 15ನೇ ಮೇ 2011ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ಬಾಲಕನೊಬ್ಬ ಕಣ್ಣು ಮುಚ್ಚಿ ಒಂದು ಪಾರ್ಕ್‌ನಲ್ಲಿ ಕುಳಿತುಕೊಳ್ಳುತ್ತಾನೆ. ಅವನು ಧ್ಯಾನ ಮಾಡುತ್ತಿದ್ದಾನೆ ಎಂದು ಜನರು ಯೋಚಿಸುತ್ತಾರೆ. "ನೀನು ಏನು ಮಾಡುತ್ತಿರುವೆ?" ಎಂದು ಹಿರಿಯರೊಬ್ಬರು ಕೇಳುತ್ತಾರೆ. ಲೈಟ್ ಚಾನಲ್ ಮಾಡುತ್ತಿರುವುದಾಗಿ ಆ ಹುಡುಗ ಹೇಳುತ್ತಾನೆ. ಅದನ್ನು ಏಕೆ ಮಾಡುತ್ತಿರುವೆ ಎಂದು ಕೇಳಿದಾಗ, "ನಾನು ಈ ಪ್ರಕೃತಿಯನ್ನು, ಈ ಮರಗಿಡಗಳನ್ನು ಪ್ರೀತಿಸುತ್ತೇನೆ" ಎಂದು ಉತ್ತರಿಸುತ್ತಾನೆ. ಆ ಹಿರಿಯರಿಗೆ ಖುಷಿಯಾಗುತ್ತದೆ. ಅವರಿಗೆ ಚಾನಲಿಂಗ್ ಬಗ್ಗೆಯಾಗಲಿ ಅಥವಾ ಧ್ಯಾನದ ಬಗ್ಗೆಯಾಗಲಿ ಗೊತ್ತಿಲ್ಲ. ಕೆಲವು ಹಿರಿಯರು ಅದರ ಬಗ್ಗೆ ಕೇಳಿ ತಿಳಿದು ಮನೆಗೆ ಹೋಗಿ ಚಾನಲ್ ಮಾಡುವುದನ್ನು ಪ್ರಾರಂಭಿಸುತ್ತಾರೆ. ಶಾಲಾ ಬಾಲಕನೊಬ್ಬ ಹಿರಿಯರಿಗೆ ಪ್ರೇರಣೆಯಾಗಬಹುದು.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಸರಳವಾದ ಧ್ಯಾನದ ತಂತ್ರಗಳ ಹಿಂದೆ ವಿಶೇಷ ಶ್ರಮ, ಅಸಾಧಾರಣ ಪ್ರೀತಿ, ನಿರಂತರವಾದ ಅಭ್ಯಾಸ ಹಾಗೂ ಬಹಳ ಕಾಲಗಳವರೆಗೆ ನಡೆಸಿದ ಪ್ರಯೋಗಪರೀಕ್ಷೆಗಳು ಇರುತ್ತವೆ. ಲೈಟ್ ಮಾಸ್ಟರ್‌ಗಳು, ಅಂತಹ ಸರಳ ಆದರೆ ಬಹಳ ಪರಿಣಾಮಕಾರಿಯಾದ ತಂತ್ರಗಳನ್ನು ತಮ್ಮ ನಿರಂತರ ಪ್ರಯತ್ನದಿಂದ, ತಮ್ಮ ಆಳವಾದ ನಿಶ್ಚಲತೆಯಲ್ಲಿ ಬೆಳಕಿನಿಂದಲೇ ಪಡೆಯುತ್ತಾರೆ. ಈ ಸರಳ ಆದರೆ ಕ್ರಾಂತಿಕಾರಿ ತಂತ್ರವಾದ ಲೈಟ್ ಚಾನಲಿಂಗ್‌ಅನ್ನು ಗುರೂಜಿ ಕೃಷ್ಣಾನಂದರವರು ಪಡೆದರು.

ಜನರು ಇದನ್ನು ಆಭ್ಯಾಸ ಮಾಡಿ ಪ್ರಯೋಜನ ಪಡೆದಿದ್ದಾರೆ. ಪ್ರತಿಯೊಬ್ಬರೂ ಇದನ್ನು ಅಭ್ಯಾಸ ಮಾಡಿ ಈ ಪ್ರಪಂಚವನ್ನು ಶಾಂತಿ ಮತ್ತು ಪ್ರೀತಿ ತುಂಬಿದ ಹೊಸಯುಗಕ್ಕೆ ಕೊಂಡೊಯ್ಯಬಹುದು.

ಲೈಟ್ ಚಾನಲಿಂಗ್ ತಂತ್ರವನ್ನು ಇಡೀ ಪ್ರಪಂಚಕ್ಕೆ ಉಡುಗೊರೆಯಾಗಿ ನೀಡಲು, ಬೆಳಕು ಗುರೂಜಿ ಕೃಷ್ಣಾನಂದರವರನ್ನು ತನ್ನ ಚಾನಲ್ ಆಗಿ ಆರಿಸಿಕೊಂಡಿತು. ಇದನ್ನು ಅಭ್ಯಾಸ ಮಾಡುವುದು ಹಾಗೂ ನಮ್ಮಲ್ಲಿ ಪರಿವರ್ತನೆಯನ್ನು ತರುವುದು, ಈ ಮಾಹಾನ್ ಮಾಸ್ಟರ್‌ರವರಿಗೆ ನಮ್ಮ ಗೌರವ ಕಾಣಿಕೆಯನ್ನು ಸಲ್ಲಿಸುವುದಕ್ಕೆ ಉತ್ತಮ ವಿಧಾನವಾಗಿದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ನಾವು ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಹೇಳಿ ಕೊಡುವುದರಲ್ಲಿ ಏಳು ವರ್ಷಗಳನ್ನು ಕಳೆಯುತ್ತಿದ್ದೇವೆ. ಶಾಲಾ ಅಧಿಕಾರಿಗಳ ಉತ್ತೇಜನ ಮತ್ತು ಸಹಕಾರದೊಂದಿಗೆ ಈ ಸರಳ ತಂತ್ರವನ್ನು ಸುಮಾರು 30 ಲಕ್ಷ ಮಕ್ಕಳಿಗೆ ಹೇಳಿಕೊಡಲು ಸಾಧ್ಯವಾಗಿದೆ. ಶಾಲೆಗಳು ನಮ್ಮ ಕಾರ್ಯಕರ್ತರನ್ನು ಸ್ವಾಗತಿಸಿದರೆ ಮಕ್ಕಳು ಲೈಟ್ ಚಾನಲಿಂಗ್‌ಅನ್ನು ಪ್ರೀತಿಸಿದರು. ಜ್ಞಾಪಕಶಕ್ತಿ ಹಾಗೂ ಏಕಾಗ್ರತೆಯನ್ನು ಉತ್ತಮಗೊಳಿಸಿಕೊಳ್ಳುವುದರ ಜೊತೆಗೆ, ಮಕ್ಕಳು ತಮ್ಮ ನಿತ್ಯ ಜೀವನದಲ್ಲಿ, ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು, ಕೋಪವನ್ನು ನಿಗ್ರಹಿಸಲು ಹಾಗೂ ಪರಸ್ಪರ ಸಂಬಂಧಗಳನ್ನು ಉತ್ತಮ ಪಡಿಸಿಕೊಳ್ಳಲು ಲೈಟ್ ಚಾನಲಿಂಗ್‌ಅನ್ನು ಬಳಸುತ್ತಿದ್ದಾರೆ.

ಅಕ್ಟೋಬರ್ 2009ರಲ್ಲಿ, ಬೆರಳೆಣಿಕೆಯಷ್ಟು ಕಾರ್ಯಕರ್ತರು, ಗುರೂಜಿಯವರಿಂದ ಆಶೀರ್ವಾದ ಪಡೆದು ಶಾಲೆಗಳಲ್ಲಿ ಲೈಟ್ ಚಾನಲಿಂಗ್‌ಅನ್ನು ಪ್ರಾರಂಭಿಸಿದರು. ನಿಧಾನವಾಗಿ ಮತ್ತು ಅಚಲವಾಗಿ ಈ ವಿಶ್ವ ಸಂಚಲನ ಆವೇಗವನ್ನು (momentum) ಪಡೆಯಿತು. ತ್ವರಿತ ಗತಿಯಲ್ಲಿ ಈ ಕೆಲಸವನ್ನು ತೆಗೆದುಕೊಂಡ ನಮ್ಮ ಎಲ್ಲಾ ಕಾರ್ಯಕರ್ತರ ಧೈರ್ಯ ಹಾಗೂ ಸ್ಥಿರಸಂಕಲ್ಪಕ್ಕೆ ನಾನು ನಮಿಸುತ್ತೇನೆ.

ಸುರಂಗದ ಕೊನೆಯಲ್ಲಿ ಬೆಳಕಿರುತ್ತದೆ ಎನ್ನುವುದು ಮಾಸ್ಟರ್‌ಗಳಿಂದ ಬಂದ ಭರವಸೆ. ಉತ್ತಮ ಪ್ರಪಂಚದ ನಿರೀಕ್ಷೆ ಎಂದಿಗೂ ಹುಸಿಯಾಗುವುದಿಲ್ಲ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 - 7)**
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೇಕರ್

**ಶನಿವಾರ (ಸಂಜೆ 6.30 - 7)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ
ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ,
8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸ್ಯಾಟ್‌ಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.



ವಿಕಲಚೇತನರ ಸಂಘದ ಕೈಗಾರಿಕಾ ತರಬೇತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸೆಪ್ಟೆಂಬರ್ 30, 2016ರಂದು, ಲೈಟ್ ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಪ್ರೀತಿ, ಈ ಸೃಷ್ಟಿಯ ಹಿಂದೆ ಇರುವ ಶಕ್ತಿ. ದಿವ್ಯ ಪ್ರೀತಿಯನ್ನು ಅಭಿವ್ಯಕ್ತಿಸಲು ನಾವು ಬೆಳಕನ್ನು ಅನುಭವಿಸಬೇಕು, ದೇವರನ್ನು ನಾವು ಅನುಭವಿಸಲೇಬೇಕು.
- ಪ್ರೀತಿಯನ್ನು ಅಭಿವ್ಯಕ್ತಿಗೊಳಿಸಿ, ಪ್ರೀತಿಯನ್ನು ಅನುಭವಿಸಿ, ಬೆಳಕನ್ನು ಅನುಭವಿಸಿ. ನಿಮ್ಮ ಇಡೀ ಜೀವನ ಸಂತೋಷಮಯವಾಗುತ್ತದೆ.
- ನಮ್ಮ ಮೂಲಕ ಕೆಲಸ ಮಾಡಲು ಧ್ಯಾನದ ಪ್ರಭಾವಕ್ಕೆ ಅವಕಾಶ ಮಾಡಿಕೊಟ್ಟಾಗ, ನಮ್ಮಲ್ಲಿ ನಕಾರಾತ್ಮಕತೆ ಇರುವುದಿಲ್ಲ.
- ಪ್ರೀತಿ, ಶಾಂತಿ, ಸತ್ಯ, ವಿಸ್ತಾರಗೊಂಡ ಪ್ರಜ್ಞೆ, ಸಂತೋಷ, ಕನಸುಗಳು, ಮಹತ್ವಾಕಾಂಕ್ಷೆಗಳು, ಸಾಹಸಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂಬ ಹಂಬಲ, ಹಂಚಿಕೊಳ್ಳಲು ಪ್ರೇರಣೆ, ಅಸತ್ಯದ ಬಗೆಗೆ ಅಸಹನೆ, ಹೀಗೆ ಅನೇಕ ರೀತಿಗಳಲ್ಲಿ ಬೆಳಕು ತನ್ನನ್ನು ತಾನು ವ್ಯಕ್ತಪಡಿಸುತ್ತದೆ.
- ಬೆಳಕು ವಾಸ್ತವದ ಸಂಗತಿ. ಬಹುಶಃ, ಬೆಳಕು, ಒಂದು ಬದಲಾಗದ ವಾಸ್ತವಾಂಶ. ಬೆಳಕು ಚಿರಂತನ. ಬೆಳಕು, ನಮ್ಮೊಳಗೆ ಹಾಗೂ ನಮ್ಮ ಸುತ್ತಲೂ ಯಾವಾಗಲೂ ಕಾಯುತ್ತಾ ಇರುತ್ತದೆ.
- ಬೆಳಕನ್ನು, ಒಂದು ಸಲ ಅಥವಾ ಒಂದು ನಿಮಿಷ ಮಾತ್ರ ಚಾನಲ್ ಮಾಡದೆ, ಯಾವಾಗಲೂ ಚಾನಲ್ ಮಾಡಿ. ನಾವು ಹೆಚ್ಚು ಬೆಳಕನ್ನು ಚಾನಲ್ ಮಾಡಿದರೆ, ಬಹು ಬೇಗ ಹೊಸಯುಗಕ್ಕೆ ಕಾಲಿಡುತ್ತೇವೆ.
- ನಮ್ಮ ಆಲೋಚನೆಗಳು ಹಾಗೂ ಕನಸುಗಳಿಂದ, ನಮ್ಮ ಭವಿಷ್ಯವನ್ನು ಸೃಷ್ಟಿಸುವವರೂ ನಾವೇ, ನಿರ್ಮಿಸುವವರೂ ನಾವೇ ಹಾಗೂ ನಮ್ಮ ಭವಿಷ್ಯವು ಸಂತೋಷದಿಂದ ಕೂಡಿರುವಂತೆ ಮಾಡುವವರೂ ನಾವೇ, ಎನ್ನುವುದನ್ನು ನಾವು ಯಾವಾಗಲೂ ಅರಿತಿರಬೇಕು.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5092 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 27.68 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬೆಳಕನ್ನು ಅರ್ಥಮಾಡಿಕೊಳ್ಳುವುದು

**ಗುರೂಜಿ ಕೃಷ್ಣಾನಂದ; ಅನು: ಶ್ರೀದೇವಿ**

"ಸಹಾಯಕ್ಕಾಗಿ ಬೆಳಕನ್ನು ಪ್ರಾರ್ಥಿಸಿದಾಗ, ಕೆಲವು ಸಲ ನನಗೆ ಸಹಾಯ ಸಿಗುತ್ತದೆ ಮತ್ತೆ ಕೆಲವೊಮ್ಮೆ ಸಿಗುವುದಿಲ್ಲ. ಏಕೆ"? ಎಂದು ಒಬ್ಬರು ಕೇಳಿದರು.

ಬೆಳಕಿನಲ್ಲಿ ಅತ್ಯುನ್ನತವಾದ ಬುದ್ಧಿಶಕ್ತಿ ಇದೆ, ಎನ್ನುವುದನ್ನು ಯಾವಾಗಲೂ ನೆನೆಪಿನಲ್ಲಿಡಬೇಕು. ನಮಗೆ ಯಾವುದು ಹಿತ ಹಾಗೂ ಯಾವುದು ಅಹಿತ, ಎನ್ನುವುದು ಬೆಳಕಿಗೆ ತಿಳಿದಿದೆ. ನಾವು ನಮ್ಮನ್ನು ವಿವೇಕಿಗಳೆಂದು ಭಾವಿಸಿದರೂ ಕೂಡ, ಬೆಳಕಿನ ವಿವೇಕದೊಂದಿಗೆ ಹೋಲಿಸಿದರೆ ನಮ್ಮ ವಿವೇಕ ಏನೇನೂ ಅಲ್ಲ.

ಬೆಳಕಿಗೆ ಭೂತ ಹಾಗೂ ಭವಿಷ್ಯತ್‌ಗಳೆರಡೂ ತಿಳಿದಿದೆ. ಏನನ್ನಾದರೂ ನಾವು ಕೇಳಿದಾಗ, ಅದು ನಮಗೆ ಒಳ್ಳೆಯದಾಗುವುದೋ ಇಲ್ಲವೋ ಎನ್ನುವುದೂ ಬೆಳಕಿಗೆ ತಿಳಿದಿದೆ. ಒಳ್ಳೆಯದು ಹಾಗೂ ಒಳ್ಳೆಯದಲ್ಲದ ಅನೇಕ ಬೇಡಿಕೆಗಳನ್ನು ಜನರು ಕೇಳುತ್ತಿರುತ್ತಾರೆ.

ಒಳ್ಳೆಯದನ್ನೇ ನಾವು ಕೇಳುತ್ತಿದ್ದೇವೆ ಎಂದು ನಾವು ಭಾವಿಸಿದರೂ ಕೂಡ, ನಾವು ಅದನ್ನು ಸರಿಯಲ್ಲದ ಸಮಯದಲ್ಲಿ ಕೇಳುತ್ತಿರಬಹುದು. ನಮಗೆ ತಿಳಿಯದ ಎಷ್ಟೋ ಕಾರಣಗಳಿರಬಹುದು.

ನಮಗೆ ಸಹಾಯ ಮಾಡಲು ಹಾಗೂ ನಾವು ಕೇಳಿದ್ದನ್ನು ಅನುಗ್ರಹಿಸಲು ಬೆಳಕು ನಿಜವಾಗಿಯೂ ಬಯಸುತ್ತದೆ, ಆದರೆ ಕೆಲವೊಮ್ಮೆ, ಬೆಳಕು ನಮಗೆ ಸಹಾಯ ಮಾಡುವುದಿಲ್ಲ. ಬೆಳಕು ನಮಗೆ ಸಹಾಯ ಮಾಡುತ್ತಿಲ್ಲವೆಂದು ನಾವು ಭಾವಿಸಿದಾಗಲೂ ಸಹ, ನಿರೀಕ್ಷಿಸಿದ ರೀತಿಯಲ್ಲಿ ಅದು ಸಹಾಯ ಮಾಡದಿರುವುದರ ಮೂಲಕ ಅದು ನಮಗೆ ಸಹಾಯ ಮಾಡುತ್ತಿದೆ ಎನ್ನುವುದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ.

ಬೆಳಕನ್ನು ಪ್ರೀತಿಸಿದಾಗ ಇದನ್ನು ನೀವು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಬೆಳಕಿನ ಬಗ್ಗೆ ನಿಮಗೆ ಅಸಾಧಾರಣವಾದ ಪ್ರೀತಿ ಇದ್ದಾಗ, ಬೆಳಕನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳುವಿರಿ ಹಾಗೂ ನಂಬುವಿರಿ. ಬೆಳಕಿನ ವಿವೇಚನೆ ಹಾಗೂ ತೀರ್ಮಾನವನ್ನು ನಂಬುವಿರಿ ಹಾಗೂ ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವಿರಿ.

ಬೆಳಕಿನ ಜೊತೆ ಶ್ರುತಿಗೂಡಿದಾಗ ಹಾಗೂ ಬೆಳಕನ್ನು ನಿಮ್ಮ ಆಂತರಿಕ ಮಾರ್ಗದರ್ಶಿಯಾಗಿ ಮಾಡಿಕೊಂಡಾಗ, ಬೆಳಕನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ನಿಮಗೆ ಸಾಧ್ಯವಾಗುತ್ತದೆ.

ಬೆಳಕನ್ನು ಸಂಪೂರ್ಣ ನಂಬಿಕೆಯೊಂದಿಗೆ ಒಪ್ಪಿಕೊಳ್ಳಿ. ನಿಮಗೆ ಯಾವಾಗಲೂ ಸರಿಯಾದ ಮಾರ್ಗದರ್ಶನ ಸಿಗುತ್ತದೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ ಬಹುದು.

### ಸೋಲಾಪೂರ್

**ಪ್ರತಿದಿನ (ಸಂಜೆ 7 - 7.30)**
ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

**ಭಾನುವಾರ (ಬೆಳಿಗ್ಗೆ 10 - 10.30)**
ನಂ. 481, ಸಾಯಿಪ್ರೇಮ್, 19ನೇ ರಸ್ತೆ, 4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್

### ಪುಣೆ

**ಶನಿವಾರ (ಸಂಜೆ 4 - 4.30)**
3B, ಕಪಿಲ ಹೌಸಿಂಗ್ ಸೊಸೈಟಿ, ಗೋಖಲೆನಗರ
☎ 9011038169 ಶ್ರೀ ಆಶುತೋಶ್ ನವನ್‌ಗುಲ್

### ಮೀರಜ್

**ಗುರುವಾರ (ಸಂಜೆ 7.45)**
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-Gat Plot No-135, ಸುಭಾಶ್ ನಗರ ಪೋಸ್ಟ್
☎ 9822421463 ಶ್ರೀ ಮಹಾಜನ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯ ಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವ ಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಲೈಟ್ ಚಾನಲಿಂಗ್ ತಂತ್ರದ ಬಗ್ಗೆ ನನ್ನ ಸ್ನೇಹಿತರಿಗೆ ಹೇಳಿದೆ. ಈ ಪರಿಕಲ್ಪನೆಯ ಸರಳತೆ ಮತ್ತು ನಮ್ಯತೆ (flexibility) ಅವರ ಮನ ಮುಟ್ಟಿದವು. ಲೈಟ್ ಚಾನಲ್ ಮಾಡಿದ ನಂತರ ಅವರು ಉಲ್ಲಾಸ ಮತ್ತು ಶಾಂತಿಯ ಅನುಭವ ಪಡೆದರು. ಲೈಟ್ ಚಾನಲ್ ಮಾಡುತ್ತಿರುವಾಗ, ನನ್ನ ಸ್ನೇಹಿತೆ ಮೈಥಿಲಿಗೆ ಅವಳ ತಲೆ ಮತ್ತು ಕುತ್ತಿಗೆಯ ಸುತ್ತ ಬೆಚ್ಚನೆಯ ಅನುಭವವಾಯಿತು.

–ಗೀತಾ ಜೋಶಿ, ಕಾರ್ಯಕರ್ತೆ

ಲೈಟ್ ಚಾನಲಿಂಗ್ ಅಭ್ಯಾಸವನ್ನು ನಾನು ಬೆಳಿಗ್ಗೆ ಮತ್ತು ರಾತ್ರಿ ಮಲಗುವ ಮುನ್ನ ನಿಯತವಾಗಿ ಮಾಡುತ್ತಿದ್ದೇನೆ. ಇದು ನನ್ನ ಮನಸ್ಸನ್ನು ಪ್ರಶಾಂತಗೊಳಿಸಿ, ನನ್ನ ವಿದ್ಯಾಭ್ಯಾಸದಲ್ಲಿ, ಏಕಾಗ್ರತೆಯಲ್ಲಿ ಮತ್ತು ಇತರೆ ಅನೇಕ ವಿಷಯಗಳಲ್ಲಿ ಸಹಾಯ ಮಾಡುತ್ತದೆ. ಮನೆಯಲ್ಲಿ ಲೈಟ್ ಚಾನಲ್ ಮಾಡುವಾಗ ನನ್ನ ಸಹೋದರನೂ ಕೂಡ ಮಾಡುತ್ತಾನೆ. ವಿದ್ಯಾಭ್ಯಾಸದಲ್ಲಿ ಹಿಂದೆ ಇದ್ದ ಅವನು ಈಗ ಸುಧಾರಿಸಿದ್ದಾನೆ. ನಮ್ಮ ಇಡೀ ಪ್ರಪಂಚ ಶಾಂತಿಯಿಂದಿರಲೆಂದು ಮತ್ತು ಪ್ರತಿಯೊಬ್ಬರೂ ಶಾಂತಿಯಿಂದ ಅನ್ಯೋನ್ಯವಾಗಿರಲೆಂದು, ನಮ್ಮ ಅಕ್ಕಪಕ್ಕದವರಿಗೆ, ಸ್ನೇಹಿತರಿಗೆ, ಮತ್ತು ಬೇರೆಯವರಿಗೂ ಈ ಬೆಳಕನ್ನು ಹರಡಲು ಪ್ರಯತ್ನಿಸಿದೆ. ಈ ಅವಕಾಶ ಕಲ್ಪಿಸಿಕೊಟ್ಟ ನಿಮಗೆ ನನ್ನ ವಂದನೆಗಳು.

–ಸೌಮ್ಯ ಹೆಚ್ ಕೆ, 9ನೇ ತರಗತಿ, ಬಸವೇಶ್ವರ ಹೈಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು

ಈ ತಂತ್ರದ ಅಭ್ಯಾಸ ಮಾಡುವುದು ನನಗೆ ಬಹಳ ಇಷ್ಟ. ಲೈಟ್ ಚಾನಲ್ ಮಾಡುವಾಗ, ಇದು ಬಹಳ ಅಮೂಲ್ಯವೆಂದು ಅನಿಸುತ್ತದೆ.

–ಚಂದನ್, 9ನೇ ತರಗತಿ, ಬಸವೇಶ್ವರ ಹೈಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು

ಲೈಟ್ ಚಾನಲ್ ಮಾಡಿದ ನಂತರ, ನನ್ನ ಮನಸ್ಸಿನಲ್ಲಿದ್ದ ಎಲ್ಲ ಒತ್ತಡಗಳು ಕಳೆದು ನನ್ನ ಮನಸ್ಸು ಪ್ರಶಾಂತತೆಯ ಅನುಭವ ಪಡೆಯಿತು. ಒಂದು ರೀತಿಯ ಹೊಸತನ ಮತ್ತು ಆಹ್ಲಾದಕರ ಭಾವನೆ ನನ್ನಲ್ಲಿ ಮೂಡಿತು. ಈ ತಂತ್ರವನ್ನು ಅಭ್ಯಾಸ ಮಾಡಲು ಇಷ್ಟ ಪಡುತ್ತೇನೆ. ಈ ಅಭ್ಯಾಸದಿಂದಾಗಿ, ಯಾವ ಸವಾಲನ್ನಾದರೂ ನಾನು ಎದುರಿಸಬಲ್ಲೆ.

–ಸುನೀಲ್ ಕುಮಾರ್, 9ನೇ ತರಗತಿ, ಬಸವೇಶ್ವರ ಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು

ಲೈಟ್ ಚಾನಲಿಂಗ್ ನಮ್ಮ ಆರೋಗ್ಯಕ್ಕೆ ಬಹಳ ಒಳ್ಳೆಯದು ಮತ್ತು ಅದು ನಮ್ಮ ಮನಸ್ಸನ್ನು ಶಾಂತಗೊಳಿಸುತ್ತದೆ. 7 ರಿಂದ 8 ನಿಮಿಷಗಳವರೆಗೆ ಕುಳಿತುಕೊಳ್ಳುವುದರಿಂದ ನಮ್ಮ ಕೈಕಾಲುಗಳು ಕೂಡ ವಿಶ್ರಾಂತಿ ಪಡೆಯುತ್ತವೆ. ನನ್ನ ಕುಟುಂಬದ ಸದಸ್ಯರೂ ಕೂಡ ಲೈಟ್ ಚಾನಲ್ ಮಾಡುತ್ತಾರೆ. ಅವರ ಆರೋಗ್ಯಕ್ಕೂ ಇದು ಒಳ್ಳೆಯದು.

–ನವೀನ್, 6ನೇ ತರಗತಿ, ಶ್ರೀ ಶಾರದ ಪ್ರೈಮರಿ ಸ್ಕೂಲ್, ಜಯನಗರ, ಬೆಂಗಳೂರು

ಲೈಟ್ ಚಾನಲ್ ಮಾಡುತ್ತಿರುವುದರಿಂದ, ನಾನು ಸಮಾಧಾನ ಮತ್ತು ಸಂತೋಷವನ್ನು ಅನುಭವಿಸುತ್ತೇನೆ. ಎಲ್ಲ ಪಠ್ಯ ವಿಷಯಗಳಲ್ಲೂ ನನ್ನ ಏಕಾಗ್ರತೆ ಉತ್ತಮಗೊಂಡಿದೆ. ನಾನು ಪ್ರತಿಯೊಬ್ಬರಿಗೂ ಉತ್ತಮ ಸ್ನೇಹಿತನಾಗಿರಲು ಬಯಸುತ್ತೇನೆ.

–ತರುಣ್ ಆರ್, 6ನೇ ತರಗತಿ, ಶ್ರೀ ಶಾರದ ಪ್ರೈಮರಿ ಸ್ಕೂಲ್, ಜಯನಗರ, ಬೆಂಗಳೂರು

ಲೈಟ್ ಚಾನಲ್ ಮಾಡುವುದಕ್ಕೆ ಮೊದಲು ನನ್ನ ಮನಸ್ಸು ಸ್ಥಿರವಾಗಿರಲಿಲ್ಲ, ಆದರೆ ಲೈಟ್ ಚಾನಲ್ ಮಾಡಿದ ನಂತರ ನನಗೆ ಸಂತೋಷವಾಯಿತು. ಚಾನಲ್ ಮಾಡಲು ನನ್ನ ಕಣ್ಣುಗಳನ್ನು ಮುಚ್ಚುತ್ತಿದ್ದಂತೆ, ಹಿತವಾದ ತಂಗಾಳಿಯ ಅನುಭವವಾಯಿತು ಮತ್ತು ನನ್ನ ಇಡೀ ದೇಹದಲ್ಲಿ ಬೆಳಕು ಹರಡುತ್ತಿರುವಂತೆ ಅನಿಸಿತು. ಈ ಬೆಳಕು ನಮ ಶಾಲೆ ಮತ್ತು ಸುತ್ತಮುತ್ತಲ ಪ್ರದೇಶಗಳಿಗೂ ಹರಡುತ್ತಿತ್ತು. ಇಡೀ ದೇಶದ ಮೇಲೆ ಕುಳಿತು ಬೆಳಕನ್ನು ಹರಡುತ್ತಿದ್ದೇನೆ ಎಂಬ ಅನುಭವವಾಯಿತು.

–ಶುಭ ಬಿ ಎಸ್, 7ನೇ ತರಗತಿ, ಸರ್ಕಾರಿ ಹೈಯರ್ ಪ್ರೈಮರಿ ಸ್ಕೂಲ್, ಪರಂಗಿಪಾಳ್ಯ, ಬೆಂಗಳೂರು

ಬೆಳಕನ್ನು ಚಾನಲ್ ಮಾಡುವಾಗ, ನಾನು ಬೆಳಕಿನ ಪ್ರಪಂಚದಲ್ಲಿದ್ದೇನೆಂಬ ಭಾವನೆ ಮೂಡುತ್ತದೆ. ನನ್ನ ಎಲ್ಲಾ ಒತ್ತಡಗಳನ್ನು ಮರೆಯುತ್ತೇನೆ ಹಾಗೂ ಸಮಾಧಾನ ಮತ್ತು ಶಾಂತಿಯನ್ನು ಅನುಭವಿಸುತ್ತೇನೆ. ನಾನು ಪ್ರತಿದಿನ 24 ನಿಮಿಷ ಬೆಳಿಗ್ಗೆ ಮತ್ತು ಸಂಜೆ ಲೈಟ್ ಚಾನಲ್ ಮಾಡುತ್ತೇನೆ ಹಾಗೂ ಅದರಿಂದ ನನಗೆ ಬಹಳ ಸಂತೋಷವಾಗುತ್ತದೆ. ಇಂಥಹ ಅನುಭವ ನೀಡಿದ ಬೆಳಕಿಗೆ ನನ್ನ ಕೃತಜ್ಞತೆಗಳು.

–ಅನುಷ ಆರ್, 10ನೇ ತರಗತಿ, ಸೇಂಟ್ ರೋಹಿತ್ ಹೈಸ್ಕೂಲ್, ಬೆಂಗಳೂರು

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ